ಓ. ಎಸ್. 481 /2012
ಡಿ. ಡಬ್ಲ್ಯೂ- 1

**ದಿನಾಂಕಃ 27-08-2019 ರಂದು ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

ನನ್ನ ತಂದೆ ಶಿವಣ್ಣನವರು 40 ವರ್ಷಗಳಿಂದ ಬೆಂಗಳೂರಿನಲ್ಲಿ ವಾಸವಿರುತ್ತಾರೆ. ನಾನು ಹುಟ್ಟಿ ಬೆಳೆದಿದ್ದು ಬೆಂಗಳೂರು ಆಗಿದ್ದು, ನಾನು ತಟ್ಟೆಕೆರೆ ಗ್ರಾಮದಲ್ಲಿ ವಾಸವಿಲ್ಲವೆಂದರೆ ಸರಿ. ಸಾಕ್ಷಿಯು ಮುಂದುವರೆದು ರಜಾ ದಿನಗಳಲ್ಲಿ ತಟ್ಟೆ ಕೆರೆಗ್ರಾಮಕ್ಕೆ ಬಂದು ಹೋಗುತ್ತಿದ್ದೆ ಒಂದು ನುಡಿಯುತ್ತಾರೆ. ನಾನು ತಟ್ಟೆ ಕೆರೆ ಗ್ರಾಮಕ್ಕೆ ಬಂದು ಹೋಗುತ್ತಿದ್ದ ಬಗ್ಗೆ ಮತ್ತು ಅಲ್ಲಿ ನಾನು ವಾಸವಿದ್ದ ಬಗ್ಗೆ ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ, ನಾನು ಸದರಿ ಗ್ರಾಮದಲ್ಲಿ ವಾಸವಿರದೇ ಇದ್ದ ಕಾರಣ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ. ತಾವು ಕ್ರಯಪತ್ರದ ಆಧಾರದ ಮೇಲೆ ದಾವಾಸ್ವತ್ತಿನ ಮಾಲೀಕರು ಎಂದು ಘೋಷಣೆ ಮಾಡುವಂತೆ ಮುನಿಲಿಂಗಯ್ಯನವರು ಓ.ಎಸ್ 481/2012 ರಂತೆ ದಾವೆ ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ನನ್ನ ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತೇನೆ. ಕ್ರಯಪತ್ರವು ಕಾನೂನು ಬಾಹಿರ ಎಂದು ಘೋಷಣೆ ಮಾಡುವಂತೆ ನಾನು ಸದರಿ ದಾವೆಯಲ್ಲಿ ಎದುರು ಕ್ಲೇಮ್ ನ್ನು ಕೇಳಿರುವುದಿಲ್ಲ ಎಂದರೆ ಸರಿ. ಕಾನೂನು ಬಾಹಿರ ಖಾತೆ ಮಾಡಿಸಿಕೊಂಡಿದ್ದು, ದಾವಾಸ್ವತ್ತನ್ನು ಪರಭಾರೆ ಮಾಡದಂತೆ ಈ ದಾವೆಯಲ್ಲಿ ಪರಿಹಾರ ಕೇಳಿದ್ದರು ಎಂದರೆ ಸರಿ. ನಾವು ದಾವಾಸ್ವತ್ತನ್ನು ಪರಭಾರೆ ಮಾಡದಂತೆ ನ್ಯಾಯಾಲಯವು ಮಧ್ಯಂತರ ಆದೇಶ ಮಾಡಿತ್ತು ಎಂದರೆ ಸರಿ. ನ್ಯಾಯಾಲಯವು ಗುಣಾವಗುಣಗಳ ಆಧಾರದ ಮೇಲೆ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಿತ್ತು ಎಂದರೆ ಸರಿ. ಸದರಿ ಆದೇಶವನ್ನು ನಾನು ಪ್ರಶ್ನಿಸಿರುವುದಿಲ್ಲ.

ಈ ಮಧ್ಯಂತರ ಆದೇಶಕ್ಕೆ ಪೂರಕವಾಗಿ ನಾವು ಒಂದು ಆದೇಶವನ್ನು ಪಡೆದುಕೊಳ್ಳುವ ಸಲುವಾಗಿ ಮತ್ತೊಂದು ದಾವೆಯನ್ನು ನಾನು ಸಲ್ಲಿಸಿದ್ದೆ ಎಂದರೆ ಸರಿಯಲ್ಲ. ವಾದಿಯು ನನ್ನ ವಿರುದ್ದ ಕೇವಿಯಟ್ ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ಸರಿ. ಓ.ಎಸ್ 208/2015 ರಲ್ಲಿ ಕೇವಿಯಟ್ ಇದ್ದ ಕಾರಣ ಸದರಿ ದಾವೆಯಲ್ಲಿ ನಮಗೆ ಕೊಟ್ಟಿದ್ದ ಆದೇಶವನ್ನು ಈ ನ್ಯಾಯಾಲಯವು ರದ್ದು ಪಡಿಸಿರುತ್ತದೆ ಎಂದರೆ ಸರಿ. ಸದರಿ ಆದೇಶ ರದ್ದು ಆದ ನಂತರ ಅದರ ವಿರುದ್ದ ನಾವು ಪ್ರಶ್ನಿಸಿರುವುದಿಲ್ಲ. ನನ್ನ ತಂದೆ ದಾವಾಸ್ವತ್ತನ್ನು ಪರಭಾರೆ ಮಾಡಿದ ಕಾರಣ ಮತ್ತು ನಾವು ದಾವಾಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇಲ್ಲದೇ ಇದ್ದ ಕಾರಣ ಈ ಮೇಲೆ ಹೇಳಿದ ಎರಡು ದಾವೆಗಳಲ್ಲಿ ಮಾಡಿದ ಆದೇಶದ ವಿರುದ್ದ ನಾವು ಮೇಲ್ಮನವಿ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಯಿಂದ ಯಾವುದೇ ತೊಂದರೆ ಇಲ್ಲದ ಕಾರಣ ನಾನು

ಮಧ್ಯಂತರ ಅರ್ಜಿಯ ಆದೇಶವನ್ನು ಪ್ರಶ್ನಿಸಿರುವುದಿಲ್ಲ. ಸಾಕ್ಷಿಯು ಮುಂದುವರೆದು ವಾದಿಯಿಂದ ನಮ್ಮ ಸ್ವತ್ತಿಗೆ ಅಡಚಣೆ ಇತ್ತು ಎಂದು ನುಡಿಯುತ್ತಾರೆ. ವಾದಿಯು ದಾವಾಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇರುವುದರಿಂದ ಅಡ್ಡಿ ಆತಂಕ ಉಂಟು ಮಾಡುವ ಪ್ರಶ್ನೇ ಉದ್ಭವವಾಗುವುದಿಲ್ಲ ಎಂದರೆ ಸರಿಯಲ್ಲ. ಓ.ಎಸ್. 481/2012 ರ ವಾದಿ ಮುನಿಲಿಂಗಯ್ಯ ನನ್ನ ದೊಡ್ಡಪ್ಪ. ಅವರು ಮತ್ತು ನನ್ನ ತಂದೆಯ ನಡುವೆ ವಿಭಾಗವಾದ ಸಂಬಂಧವಾಗಿ ನನ್ನ ತಂದೆಯ ಭಾಗಕ್ಕೆ 6 ಕೃಷಿ ಜಮೀನುಗಳು ಮತ್ತು ಒಂದು ಮನೆ ಬಂದಿತ್ತು. ಸದರಿ ಕೃಷಿ ಜಮೀನುಗಳಲ್ಲಿ ನನ್ನ ತಂದೆಯು 5 ಜಮೀನುಗಳನ್ನು ವಾದಿಗೆ ಮಾರಾಟ ಮಾಡಿರುತ್ತಾರೆಂದರೆ 4 ಜಮೀನುಗಳನ್ನು ಮಾತ್ರ ಮಾರಾಟ ಮಾಡಿರುತ್ತಾರೆ. ಆ ರೀತಿ ಮಾರಾಟ ಮಾಡಿರುವ ಬಗ್ಗೆಯೂ ನನಗೆ ಸರಿಯಾಗಿ ಗೊತ್ತಿರುವುದಿಲ್ಲ. ಅದು 1983-84 ರಲ್ಲಿಯೇ ಮಾರಾಟವಾಗಿರುತ್ತದೆ. ಸಾಕ್ಷಿಗೆ ಒಂದು ದಾಖಲೆ ತೋರಿಸಲಾಗಿ, ಒಂದು ಮನೆಯನ್ನು ನನ್ನ ತಂದೆಯು ವಾದಿ ಮುನಿಲಿಂಗಯ್ಯನವರಿಗೆ ಮಾರಾಟ ಮಾಡಿದ ಕ್ರಯಪತ್ರ ಎಂದು ಒಪ್ಪಿಕೊಂಡ ಕಾರಣ ಸದರಿ ದಾಖಲೆಯನ್ನು ನಿಪಿ-13 ಎಂದು ಗುರ್ತಿಸಲಾಯಿತು. ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಿ ತನ್ನ ತಂದೆಯು ಕೆಲವು ಆಸ್ತಿಗಳನ್ನು ವಾದಿ ಮುನಿಲಿಂಗಯ್ಯನವರಿಗೆ ಮಾರಾಟ ಮಾಡಿದ ಬಗ್ಗೆ ಕ್ರಯಪತ್ರ ಎಂದು ಒಪ್ಪಿಕೊಂಡ ಕಾರಣ ಸದರಿ ಕ್ರಯಪತ್ರದ ದೃಢೀಕೃತ ಪ್ರತಿಯನ್ನು ನಿಪಿ-14 ಎಂದು ಗುರ್ತಿಸಲಾಯಿತು. ಈ ರೀತಿ ಮಾರಾಟ ಮಾಡಿದ ರೀತಿಯಲ್ಲಿಯೇ ದಾವಾಸ್ವತ್ತನ್ನು ನನ್ನ ತಂದೆಯು ಮುನಿಲಿಂಗಯ್ಯನವರಿಗೆ ನಿಪಿ-2 ರ ಪ್ರಕಾರ ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ.

ನನ್ನ ತಂದೆಯು ಓಡಾಡಲು ಅಶಕ್ತರಾಗಿದ್ದ ಕಾರಣ ದಾವಾಸ್ವತ್ತಿಗೆ ಸಂಬಂಧಿಸಿದಂತೆ ಅವರು ಯಾವುದೇ ದಾಖಲೆಯನ್ನು ಯಾರಿಗೂ ಮಾಡಿಕೊಟ್ಟಿರುವುದಿಲ್ಲ. ವಾದಿಯು ದಾವಾಸ್ವತ್ತಿಗೆ ಸಂಬಂಧಿಸಿದಂತೆ ಯಾವ ಕಾರಣಕ್ಕಾಗಿ ದಾಖಲೆಯನ್ನು ಬೋಗಸ್ ಮಾಡಿರುತ್ತಾರೆಂದು ನನ್ನ ಗಮನದಲ್ಲಿ ಇರುವುದಿಲ್ಲ. ಆ ರೀತಿ ಬೋಗಸ್ ಆಗಿರುವ ಬಗ್ಗೆ 2002 ರಲ್ಲಿ ನನ್ನ ಗಮನಕ್ಕೆ ಬಂದಿರುತ್ತದೆ. ಬೋಗಸ್ ಆದ ಬಗ್ಗೆ ತಹಶೀಲ್ದಾರವರ ಮೂಲಕ ನಾನು ಕ್ರಮ ತೆಗೆದುಕೊಂಡಿರುತ್ತೇನೆ. ಆ ರೀತಿ ಕ್ರಮ ತೆಗೆದುಕೊಂಡ ಬಗ್ಗೆ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಾವಾಸ್ವತ್ತಿನಲ್ಲಿ ಗ್ಯಾಸ್ ಲೈನ್ ಹಾದು ಹೋಗಿದೆ ಎಂದರೆ ಸರಿಯಲ್ಲ. ಆ ರೀತಿ ದಾವಾಸ್ವತ್ತಿನಲ್ಲಿ ಗ್ಯಾಸ್ ಲೈನ್ ಹಾದುಹೋಗಿದ್ದು ವಾದಿಯು ಪರಿಹಾರವನ್ನು ಪಡೆದುಕೊಂಡಿರುತ್ತಾರೆಂದರೆ ಸರಿಯಲ್ಲ. ವಾದಿಯು ಪರಿಹಾರ ಪಡೆದುಕೊಂಡ ಬಗ್ಗೆ ನಾನು ಯಾವುದೇ ಕ್ರಮ ತೆಗೆದುಕೊಂಡಿಲ್ಲ ಎಂದರೆ, ವಾದಿಯು ತಾನು ತೆಗೆದುಕೊಂಡ ಪರಿಹಾರ ಮೊತ್ತದಲ್ಲಿ ಅರ್ಧ ಮೊತ್ತವನ್ನು ತಪ್ಪಾಯಿತು ಎಂದು ಕ್ಷಮೆ ಕೋರಿ ನನ್ನ ತಂದೆಗೆ ವಾಪಸ್ಸು ಮಾಡಿರುತ್ತಾರೆ. ಈ ಸಂಬಂಧವಾಗಿ ನಾನು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿರುವುದಿಲ್ಲ. ಈ ಸಂಬಂಧವಾಗಿ ಯಾವುದೇ ದಾಖಲೆ ಆಗಿರುವುದಿಲ್ಲ. ಆ ರೀತಿ ಕ್ಷಮೆ ಕೋರುವ

ಮತ್ತು ಅರ್ಥ ಮೊತ್ತವನ್ನು ವಾಪಸ್ಸು ಮಾಡುವ ಸಂದರ್ಭ ಬಂದಿಲ್ಲ ಎಂದರೆ ಸರಿಯಲ್ಲ.

1995 ರಲ್ಲಿ ನನ್ನ ತಂದೆಗೆ ಆರೋಗ್ಯ ಸರಿ ಇರಲಿಲ್ಲ ಎಂದು ತೋರಿಸಲು ನಾನು ವೈದ್ಯಕೀಯ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಅದು ನಿಡಿ-22 ಆಗಿರುತ್ತದೆ. ಸದರಿ ದಾಖಲೆಯನ್ನು ವೈದ್ಯರು ಯಾವಾಗ ನೀಡಿರುತ್ತಾರೆಂದು ದಿನಾಂಕ ನಮೂದಿಲ್ಲ ಎಂದರೆ ಸರಿ. ನಿಡಿ-22 ನ್ನು ಸೃಷ್ಟಿ ಮಾಡಿಕೊಂಡು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆಂದರೆ ಸರಿಯಲ್ಲ. ಸದರಿ ದಾಖಲೆಯನ್ನು ಸೃಷ್ಟಿ ಮಾಡಿರುವುದರಿಂದ ನಿಡಿ-22 ರಲ್ಲಿ ದಿನಾಂಕ ಇರುವುದಿಲ್ಲ ಎಂದರೆ ಅವರು ಮರೆತು ದಿನಾಂಕ ನಮೂದು ಮಾಡಿರುವುದಿಲ್ಲ. ಸದರಿ ದಾಖಲೆಯನ್ನು ಸೃಷ್ಟಿ ಮಾಡಿರುವುದರಿಂದ ದಿನಾಂಕ ನಮೂದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯು ದಿ.17-10-2005 ರಂದು ಮೃತರಾಗಿರುತ್ತಾರೆಂದರೆ ಸರಿ. ನನ್ನ ತಂದೆಯು ಮೃತರಾಗುವ ದಿನಾಂಕದವರೆಗೂ ಆರೋಗ್ಯದಿಂದ ಚನ್ನಾಗಿದ್ದರು ಎಂದರೆ ಸರಿಯಲ್ಲ. ವೈದ್ಯರಾದ ಜೋಷಿರವರು ಪೆರಾಲಿಸಿಸ್ ಕಾಯಿಲೆಯ ತಜ್ಞರಲ್ಲ ಎಂದರೆ ಸರಿ. ಅವರು ಎಲ್ಲಾ ಕಾಯಿಲೆಗೂ ಚಿಕಿತ್ಸೆ ನೀಡುವ ವೈದ್ಯರಾಗಿರುತ್ತಾರೆ. ನಿಡಿ-22 ನ್ನು ನಾನು ಸೃಷ್ಟಿ ಮಾಡಿಸಿಕೊಂಡು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆಂದರೆ ಸರಿಯಲ್ಲ. ವೈದ್ಯರು ಚಿಕಿತ್ಸೆ ನೀಡಿದ ಬಗ್ಗೆ ರಿಜಿಸ್ಟರ್ ನ್ನು ಹಾಜರುಪಡಿಸಿಲ್ಲ ಎಂದರೆ, ಅವರು ಅವರ ಮನೆಯಲ್ಲಿ ನನ್ನ ತಂದೆಗೆ ಚಿಕಿತ್ಸೆ ನೀಡಿದ ಕಾರಣ ಯಾವುದೇ ರಿಜಿಸ್ಟರ್ ನ್ನು ಇಟ್ಟುಕೊಂಡಿರುವುದಿಲ್ಲ.

ವಾದಿಗೆ ಸರ್ವೆ ನಂ. 65/2 ಆಸ್ತಿಯನ್ನು ಹೊರತುಪಡಿಸಿ ಬೇರೆ ಆಸ್ತಿಗಳನ್ನು ನನ್ನ ತಂದೆಯು ಮಾರಾಟ ಮಾಡಿರುತ್ತಾರೆಂದರೆ ನನ್ನ ತಂದೆಯು ಸರ್ವೆ ನಂ. 65/2 ಮತ್ತು 95/6 ಆಸ್ತಿಗಳನ್ನು ಹೊರತುಪಡಿಸಿ, ಉಳಿದ ಆಸ್ತಿಗಳನ್ನು ಮಾರಾಟ ಮಾಡಿರುತ್ತಾರೆ. ಆ ರೀತಿ ಮಾರಾಟ ಮಾಡಿರುವ ಬಗ್ಗೆ ಈ ದಿನ ಕ್ರಯಪತ್ರವನ್ನು ತೋರಿಸಿದ ನಂತರ ನನ್ನ ಗಮನಕ್ಕೆ ಬಂದಿರುತ್ತದೆ. ನನ್ನ ತಂದೆಯು ಸರ್ವೇ ನಂ. 95/6 ಆಸ್ತಿಯನ್ನು ವಾದಿಗೆ ಮಾರಾಟ ಮಾಡಿದ ಬಗ್ಗೆ ವಾದಿಯ ಹೆಸರಿಗೆ ಎಂ.ಆರ್ ನಂ. 2/94-95 ರಂತೆ ಮ್ಯುಟೇಶನ್ ಸ್ವೀಕಾರ ಆಗಿರುತ್ತದೆ ಎಂದರೆ ಸರಿಯಲ್ಲ. ವಾದಿಯ ಹೆಸರಿಗೆ ಪಹಣಿ ಬರದೇ ಇದ್ದ ಕಾರಣ ಅದನ್ನು ದುರುಪಯೋಗಪಡಿಸಿಕೊಂಡು ನನ್ನ ತಾಯಿ ಹೆಸರಿಗೆ ಖಾತೆ ಮಾಡಿಸಿರುತ್ತೇವೆಂದರೆ ಸರಿಯಲ್ಲ. ಸದರಿ ಖಾತೆಯನ್ನು ವಾದಿಯು ಎ.ಸಿ.ಯವರ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದರು ಎಂದರೆ ಸರಿ. ಅದರ ನಂ.ಆರ್. ಎ. 174/11-12 ಎಂದರೆ ಸರಿ. ಸದರಿ ಪ್ರಕರಣದಲ್ಲಿ

ನಾನೂ ಸಹ ಹಾಜರಾಗಿದ್ದೆ ಎಂದರೆ ಸರಿ. ಸಿವಿಲ್ ನ್ಯಾಯಾಲಯದಲ್ಲಿ ದಾವೆ ಇರುವುದರಿಂದ ಅದರಂತೆ ನಡೆದುಕೊಳ್ಳುವಂತೆ ಸೂಚಿಸಿ ಎ.ಸಿ.ರವರು ಆದೇಶ ಮಾಡಿರುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯಕೋರಿದ್ದು, ಮುಂದೂಡಲಾಯಿತು.**

(ಉಖ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒಪ್ಪಿದ್ದಾರೆ,

2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಮಾಗಡಿ.